**ದಿನಾಂಕ 28.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ: ಶ್ರೀ. ಎಲ್.ಇ. ವಕೀಲರಿಂದಃ-**

ಆರೋಪಿಯು ಪಿಯುಸಿಯಲ್ಲಿ ನನ್ನೊಂದಿಗೆ ಓದಿದ್ದು, ನನ್ನ ಸ್ನೇಹಿತೆ ಆಗಿರುತ್ತಾಳೆ. ಆರೋಪಿ ನನ್ನೊಂದಿಗೆ ಪಿಯುಸಿ ನಂತರವು ವಿಶ್ವಾಸದಿಂದ ಇದ್ದನು. ನಾನು ಖಾಸಗಿ ಶಾಲೆಯಾದ ಹೈವೆ ಇಂಗ್ಲೀಷ್ ಶಾಲೆಯಲ್ಲಿ ದೈಹಿಕ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನನಗೆ ಸದರಿ ಶಾಲೆಯಲ್ಲಿ ಎಲ್ಲಾ ಕಡಿತಗೊಂಡು ರೂ.18,500/- ಸಂಬಳ ಸಿಗುತ್ತದೆ. ನನ್ನ ಹೆಸರಿನಲ್ಲಿ ಅರುವನಹಳ್ಳಿಯಲ್ಲಿ ಸರ್ವೆ ನಂ.23/13 ರಲ್ಲಿ 01 ಎಕರೆ ಜಮೀನು ಇರುತ್ತದೆ. ನನ್ನ ತಂದೆಯ ಹೆಸರಿನಲ್ಲಿ 03 ಎಕರೆ ಅಡಿಕೆ ತೋಟದಲ್ಲಿ ಇರುತ್ತದೆ. ಸಿದ್ದರಹಳ್ಳಿಯಲ್ಲಿ ನನ್ನ ತಂದೆಯ ಹೆಸರಿನಲ್ಲಿ 01 ಎಕರೆ 14 ಗುಂಟೆ ತೆಂಗಿನ ತೋಟ ಇರುತ್ತದೆ.

ನಾನು ನನ್ನ ತಂದೆಗೆ ಒಬ್ಬನೇ ಗಂಡು ಮಗನಾಗಿದ್ದು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಮನೆಯ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ. ನನಗೆ ಈಗ 37 ವರ್ಷ ವಯಸ್ಸಾಗಿರುತ್ತದೆ. ನನ್ನ ಬಳಿ ಆರೋಪಿಯು ದಿನಾಂಕ 15.01.2024 ರಂದು ಫೋನ್ ಮಾಡಿ ಹಣದ ಅವಶ್ಯಕತೆ ಇದೆ ಎಂದು ನನಗೆ ತಿಳಿಸಿರುತ್ತಾನೆ. ಸದರಿ ವಿಚಾರವನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ.

ನಾನು ನಿಪಿ.3 ರ ನೋಟೀಸನ್ನು ಓದಿ ಸಹಿ ಮಾಡಿರುತ್ತೇನೆ. ನಾನು ಆರೋಪಿಗೆ ದಿನಾಂಕ 21.01.2024 ರಂದು ರೂ.10 ಲಕ್ಷ ಹಣವನ್ನು ಸಾಲವಾಗಿ ನೀಡಿರುತ್ತೇನೆ. ನಾನು ರೂ.10 ಲಕ್ಷ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಆರೋಪಿಗೆ ನಾನು ಆರ್.ಟಿ.ಜಿ.ಎಸ್. ಮೂಲಕ ಅಥವಾ ನೆಫ್ಟ್ ಮೂಲಕ ಹಣವನ್ನು ವರ್ಗಾವಣೆ ಮಾಡಲು ಕೇಳಿರುತ್ತೇನೆ. ಆದರೆ ಆರೋಪಿಯು ನನ್ನ ಅತ್ತೆಗೆ ಶಸ್ತ್ರ ಚಿಕಿತ್ಸೆ ಮಾಡಿಸಬೇಕಾಗಿ ಆದ್ದರಿಂದ ನೇರವಾಗಿ ಬಂದು ನಿನ್ನ ಬಳಿ ಹಣ ತೆಗೆದುಕೊಳ್ಳುತ್ತೇನೆ ಎಂದು ಬಂದು ಹಣ ತೆಗೆದುಕೊಂಡು ಹೋಗಿರುತ್ತಾಳೆ. ಸದರಿ ವಿಚಾರಗಳನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ನಿಪಿ.3 ರ ನೋಟೀಸನ್ನು ಓದಿದಾಗ ಸದರಿ ವಿಚಾರಗಳನ್ನು ಸದರಿ ನೋಟೀಸಿನಲ್ಲಿ ನಮೂದಿಸಿರುವುದಿಲ್ಲ. ಸದರಿ ವಿಚಾರಗಳನ್ನು ನೋಟೀಸಿನಲ್ಲಿ ನಮೂದಿಸುವಂತೆ ನನ್ನ ವಕೀಲರಿಗೆ ನಾನು ತಿಳಿಸಿರುವುದಿಲ್ಲ. ನಾನು ಸದರಿ ವಿಚಾರಗಳನ್ನು ನನ್ನ ವಕೀಲರಿಗೆ ಪ್ರಶ್ನಿಸಿರುತ್ತೇನೆ. ನಾನು ನನ್ನ ದೂರಿನಲ್ಲಿ ಕುಟುಂಬದ ಅವಶ್ಯಕತೆಗಳಿಗೋಸ್ಕರ ಆರೋಪಿಯು ಹಣವನ್ನು ಕೇಳಿರುತ್ತಾರೆ ಎಂದು ನಮೂದಿಸಿದ್ದು ಅದನ್ನು ಹೊರತುಪಡಿಸಿ ಬೇರೆ ಯಾವುದೇ

ಕಾರಣಗಳನ್ನು ನಿಮಗೆ ತಿಳಿಸಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಅತ್ತೆಯ ಶಸ್ತ್ರ ಚಿಕಿತ್ಸೆಗಾಗಿ ಮತ್ತು ಆರೋಪಿಯ ಗಂಡನ ಹೃದಯ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇದೆ ಎಂದು ನನ್ನ ಬಳಿ ತಿಳಿಸಿ ಪುನಃ ರೂ.5 ಲಕ್ಷ ಹಣವನ್ನು ಸಾಲವಾಗಿ ಕೇಳಿರುತ್ತಾಳೆ. ಸದರಿ ವಿಚಾರಗಳನ್ನು ಸಹ ನಾನು ನನ್ನ ವಕೀಲರ ಬಳಿ ತಿಳಿಸಿರುತ್ತೇನೆ. ಸದರಿ ಅಂಶಗಳು ನಿಪಿ.3 ರ ನೋಟೀಸಿನಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ಮೊದಲಿಗೆ ರೂ.10 ಲಕ್ಷ ಹಣವನ್ನು ಆರೋಪಿಗೆ ನಾನು ನಮ್ಮ ಮನೆಯಲ್ಲಿ ದಿನಾಂಕ 21.01.2024 ರಂದು ನೀಡಿರುತ್ತೇನೆ. ಆ ದಿನ ನಾನು ಆರೋಪಿಯಿಂದ ಹಣದ ಭದ್ರತೆಗಾಗಿ ಯಾವುದೇ ದಾಖಲಾತಿಯನ್ನು ತೆಗೆದುಕೊಂಡಿರುವುದಿಲ್ಲ, ನಂಬಿಕೆ ವಿಶ್ವಾಸದಿಂದ ಹಣವನ್ನು ಸಾಲವಾಗಿ ನೀಡಿರುತ್ತೇನೆ.

ದಿನಾಂಕ 28.01.2024 ರಂದು ಪುನಃ ಆರೋಪಿಗೆ ರೂ.5 ಲಕ್ಷ ಹಣವನ್ನು ಸಾಲವಾಗಿ ನೀಡಿರುತ್ತೇನೆ. ಸದರಿ ಹಣವನ್ನು ಸಹ ನಮ್ಮ ಮನೆಯಲ್ಲಿಯೇ ಸಾಲವಾಗಿ ನೀಡಿರುತ್ತೇನೆ. ಆರೋಪಿಗೆ ನಾನು ಸಾಲವಾಗಿ ನೀಡಿದ ಹಣ ಎಲ್ಲವು ರೂ.500/- ಮುಖ ಬೆಲೆಯ ನೋಟುಗಳಾಗಿರುತ್ತವೆ. ನಾನು ಮೊದಲಿಗೆ ರೂ.10 ಲಕ್ಷ ಹಣವನ್ನು ಆರೋಪಿಗೆ ನೀಡುವ ಮೊದಲು ಬ್ಯಾಂಕಿನ ನನ್ನ ಖಾತೆಗಳಿಂದ ಬಿಡಿಸಿಕೊಂಡು ಬಂದಿರುತ್ತೇನೆ, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಮುಂದಿನ ದಿನಾಂಕದಲ್ಲಿ ಸದರಿ ದಾಖಲಾತಿಯನ್ನು ಹಾಜರುಪಡಿಸಲು ನಾನು ತಯಾರಿರುತ್ತೇನೆ. ಪುನಃ ನಾನು ಆರೋಪಿಗೆ ನೀಡಿದ ರೂ.5 ಲಕ್ಷ ಹಣವು ಸಹ ರೂ.500/- ಮುಖ ಬೆಲೆಯ ನೋಟುಗಳಾಗಿರುತ್ತವೆ. ಆರೋಪಿಗೆ ನಾನು ಪುನಃ ರೂ.5 ಲಕ್ಷ ಹಣವನ್ನು ಸಾಲವಾಗಿ ನೀಡುವಾಗಲೂ ಸಹ ಆರೋಪಿಯಿಂದ ಭದ್ರತೆಗಾಗಿ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ, ನಂಬಿಕೆ ಮತುತ ವಿಶ್ವಾಸದಿಂದ ಆರೋಪಿಗೆ ಹಣವನ್ನು ಸಾಲವಾಗಿ ನೀಡಿರುತ್ತೇನೆ.

ಆರೋಪಿಯು ನನಗೆ ನೀಡಿರುತ್ತಾರೆಂದು ಹೇಳುವ ಚೆಕ್ ನಂಬರು 640698 ಚಡಚಣ್ಣ ಕೆನರಾ ಬ್ಯಾಂಕಿಗೆ ಸೇರಿದ ಚೆಕ್ಕನ್ನು ನನಗೆ ನೀಡಿರುತ್ತಾರೆ. ಆರೋಪಿಯ ಊರಾದ ಬಿಜಾಪುರ ಜಿಲ್ಲೆಯ ಜೇ ಊರಿಗೆ ಹೋಗಿ ನಾನು ಚೆಕ್ಕನ್ನು ಆರೋಪಿಯಿಂದ ಪಡೆದುಕೊಂಡು ಬಂದಿರುತ್ತೇನೆ. ನಾನು ಆರೋಪಿಯ ಊರಿಗೆ ಬಸ್ಸಿನಲ್ಲಿ ಹೋಗಿರುತ್ತೇನೆ. ನಾನು ಬಸ್ಸಿನಲ್ಲಿ ಹೋದ ಬಗ್ಗೆ ಟಿಕೆಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಬಸ್ಸು ಇಳಿದ ಆ ರಸ್ತೆಯ ನಂಬರನ್ನು ನಾನು ತಿಳಿದುಕೊಂಡಿರುವುದಿಲ್ಲ. ನಾನು ಜೇ

ಊರು ಗ್ರಾಮದ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನೀಡಿದ ಚೆಕ್ಕನ್ನು ನಾನು ಹಾಜರುಪಡಿಸಿದಾಗ "kindly contact drawer drawee bank and please present again" ಎಂಬ ಹಿಂಬರಹವನ್ನು ಬ್ಯಾಂಕಿನಿಂದ ನೀಡಿರುತ್ತಾರೆ. ಆರೋಪಿಯು ನಿಪಿ.1ರ ಚೆಕ್ಕಿನ ಮೇಲೆ ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ.1ರ ಒಕ್ಕಣೆಗಳು ಕನ್ನಡದಲ್ಲಿ ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯೇ ಚೆಕ್ಕನ್ನು ಆ ರೀತಿ ನನ್ನ ಮುಂದೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1ರ ಚೆಕ್ಕಿನ ಮೇಲಿರುವ ಸಹಿ ಮತ್ತು ಒಕ್ಕಣೆಗಳ ಇಂಕು ಬೇರೆ–ಬೇರೆ ಆಗಿರುತ್ತವೆ ಎಂದರೆ ಸರಿಯಲ್ಲ. ಆರೋಪಿ ನೀಡಿದ ನಿಪಿ.1ರ ಚೆಕ್ಕನ್ನು ದಿನಾಂಕ 20.06.2024ರಂದು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಎಸ್,ಬಿ.ಐ. ಬ್ಯಾಂಕ್, ಕಡೂರು ಶಾಖೆಗೆ ನಾನು ಚೆಕ್ಕನ್ನು ಹಾಜರುಪಡಿಸಿರುತ್ತೇನೆ. ನಾನು ಜೇ ಊರಿಗೆ ಹೋಗಲು 8 ಗಂಟೆ ಬೇಕಾಗಿರುತ್ತದೆ, ಬರಲು ಸಹ 8 ಗಂಟೆ ಬೇಕಾಗಿರುತ್ತದೆ. ಬ್ಯಾಂಕಿನಿಂದ ಹಿಂಬರಹವನ್ನು ತೆಗೆದುಕೊಂಡ ನಂತರ ನಾನು ಆರೋಪಿಗೆ ಫೋನ್ ಮಾಡಿರುತ್ತೇನೆ, ಆದರೆ ಆರೋಪಿಯು ನನ್ನ ಫೋನ್ ಅನ್ನು ತೆಗೆದಿರುವುದಿಲ್ಲ.

ಆರೋಪಿಯ ಗಂಡ ಮುರುಳಿ ನನಗೆ ಆರೋಪಿ ವಿವಾಹವಾದ 02ವರ್ಷಗಳಿಂದ ಪರಿಚಯ ಇರುತ್ತಾರೆ. ನಿಪಿ.3ರ ನೋಟೀಸಿನಲ್ಲಿ ನನ್ನ ಅಥವಾ ನನ್ನ ವಕೀಲರ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಟ್ಟಂತಹ ಎಲ್ಲಾ ಮಾಹಿತಿಯನ್ನು ನಿಪಿ.3ರ ನೋಟೀಸಿನಲ್ಲಿ ನನ್ನ ವಕೀಲರು ನಮೂದು ಮಾಡಿರುತ್ತಾರೆ. ನಾನು ಅದನ್ನು ಓದಿ ಸಹಿ ಮಾಡಿರುತ್ತೇನೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಸಹಿ/–

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.